## ನಿಮ್ಮೊಡನೆ

# ಮಾಲಿನ್ಯ: ಅಪಾಯದ ಗಂಟೆ

> ಜೀವಕಂಟಕ ವಾಯು ಮಾಲಿನ್ಯ ಕೇವಲ ಘೋಷಣೆಗಳನ್ನು ಕೂಗುವುದರಿಂದ, ಜಾಹೀರಾತುಗಳನ್ನು ಪ್ರಕಟಿಸುವುದರಿಂದ ಬಗೆಹರಿಯುವುದಿಲ್ಲ. ಮುಂದುವರಿದ ದೇಶಗಳು ಸ್ವಚ್ಛ ಇಂಧನ ತಂತ್ರಜ್ಞಾನಗಳನ್ನು ಹಿಂದುಳಿದ ದೇಶಗಳ ಜತೆಗೆ ಹಂಚಿಕೊಳ್ಳಬೇಕಾದ ಅಗತ್ಯವಿದೆ..

ಪರಿಸರದ ರಕ್ಷಣೆ ನಮ್ಮ ಹೊಣೆಯೇ ಅಲ್ಲ ಎನ್ನುವಂತೆ ವರ್ತಿಸುತ್ತಿರುವುದರ ಪರಿಣಾಮ ನಮ್ಮ ಕಣ್ಣಮುಂದೆಯೇ ಇದೆ. ಮುಖ್ಯವಾಗಿ ವಾಯು ಮಾಲಿನ್ಯ ಮನುಷ್ಯನ ಆಯುಷ್ಯವನ್ನು ಕಡಿಮೆಗೊಳಿಸುತ್ತಿರುವುದಷ್ಟೇ ಅಲ್ಲ, ಬದುಕಿನ ಗುಣಮಟ್ಟವನ್ನೂ ಹದಗೆಡಿಸುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆ ಈ ನಿಟ್ಟಿನಲ್ಲಿ ಪದೇ ಪದೇ ಎಚ್ಚರಿಕೆ ನೀಡುತ್ತಿದ್ದರೂ ನಾವು ನಿದ್ದೆಯನ್ನೇ ನಟಿಸುತ್ತಿದ್ದೇವೆ. ವಿಶ್ವ ಆರೋಗ್ಯ ಸಂಸ್ಥೆಯ ಇತ್ತೀಚಿನ ವರದಿಯ ಪ್ರಕಾರ, 2012ರ ಒಂದು ವರ್ಷದಲ್ಲೇ ಭಾರತದಲ್ಲಿ ಸುಮಾರು 6 ಲಕ್ಷ ಜನರು ವಾಯು ಮಾಲಿನ್ಯದಿಂದ ಪ್ರಾಣ ಕಳೆದುಕೊಂಡಿದ್ದಾರೆ. ಚೀನಾ ಬಿಟ್ಟರೆ (ಅಲ್ಲಿ 8 ಲಕ್ಷ ಜನ ಪ್ರಾಣ ತೆತ್ತಿದ್ದಾರೆ.) ಭಾರತವೇ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಇದು ಹೊರಾಂಗಣದ ವಾಯು ಮಾಲಿನ್ಯದ ವಿಷಯವಾಯಿತು. ಕೆಲವು ತಿಂಗಳ ಹಿಂದೆ ವಿಶ್ವ ಆರೋಗ್ಯ ಸಂಸ್ಥೆ ಪ್ರಕಟಿಸಿದ ವರದಿಯಲ್ಲಿ ಭಾರತದಲ್ಲಿ ಒಳಾಂಗಣ ವಾಯು ಮಾಲಿನ್ಯ ಉಂಟು ಮಾಡಿರುವ ರೋಗಗಳಿಂದ 14 ಲಕ್ಷ ಜನ ಸತ್ತಿದ್ದಾರೆ ಎಂದು ತಿಳಿಸಲಾಗಿತ್ತು. ಈ ವಾಯು ಮಾಲಿನ್ಯವೂ ಕೈಗಾರಿಕೆ, ವಾಹನಗಳು ಮತ್ತು ಜೈವಿಕ ಅನಿಲಗಳಿಂದ ಉಂಟಾಗುವಂತಹದ್ದು. ವಿಶ್ವ ಆರೋಗ್ಯ ಸಂಸ್ಥೆಯ ವರದಿಯಲ್ಲಿ ನೈಟ್ರೋಜನ್ ಆಕ್ಸೈಡ್ ಮುಂತಾದ ರಾಸಾಯನಿಕಗಳಿಂದ ಉಂಟಾಗುವ ವಾಯು ಮಾಲಿನ್ಯವನ್ನು ಅಂದಾಜಿಸಲಾಗಿಲ್ಲ. ವಾಯು ಮಾಲಿನ್ಯದಿಂದಾಗಿ ಹುಟ್ಟುವಾಗಲೇ ಸಾಯುವ ಅಥವಾ ಬಾಲ್ಯದಲ್ಲಿ ನಿಧನ ಹೊಂದುವ ಮಕ್ಕಳ ಲೆಕ್ಕವನ್ನೂ ಸೇರಿಸಿಲ್ಲ. ಅದೂ ಸೇರಿದರೆ ಈ ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗಬಹುದು. ಪರಿಸ್ಥಿತಿಯ ಗಂಭೀರತೆಯನ್ನು ಈಗಲಾದರೂ ನಾವು ಅರ್ಥ ಮಾಡಿಕೊಂಡು, ವಾಯು ಮಾಲಿನ್ಯ ತಡೆಗೆ ಅತ್ಯಂತ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಬೆಂಗಳೂರಿನ ಉದಾಹರಣೆಯನ್ನೇ ತೆಗೆದುಕೊಳ್ಳಿ. ಹತ್ತಿಪ್ಪತ್ತು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಇದ್ದ ಮರಗಳು ಇಡೀ ನಗರಕ್ಕೆ ಹಸಿರುಕವಚವನ್ನು ಹೊದ್ದಂತಿತ್ತು. ಆದರೆ ನಗರೀಕರಣದ ಭರದಲ್ಲಿ ಸಾವಿರಾರು ಮರಗಳಿಗೆ ಕೊಡಲಿಯೇಟು ಬಿದ್ದಿದೆ. ರಸ್ತೆ ಅಗಲೀಕರಣ ಮತ್ತು ಮೆಟ್ರೊ ರೈಲು ಕಾಮಗಾರಿಗಾಗಿ ಕಡಿದ ಮರಗಳಿಗೆ ಲೆಕ್ಕವಿಲ್ಲ. ಈಗ ಮತ್ತೆ ಉಕ್ಕಿನ ಮೇಲ್ಸೇತುವೆಗಾಗಿ ನೂರಾರು ಮರಗಳನ್ನು ಕಡಿಯಲಾಗುತ್ತಿದೆ. ಬೆಂಗಳೂರಿನಲ್ಲಿ ಬಹುತೇಕರ ಮನೆಗಳಲ್ಲಿ 2–3 ವಾಹನಗಳಿವೆ. ಪ್ರತಿದಿನ ನೂರಾರು ಹೊಸ ವಾಹನಗಳು ಬೀದಿಗಿಳಿಯುತ್ತಿವೆ. ಇದಕ್ಕೆ ಸಂಬಂಧಿಸಿ ಯಾವ ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳಲೂ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರವನ್ನು ಪ್ರಶ್ನಿಸಬೇಕಾದ ನಾಗರಿಕರು ಪ್ರತಿಭಟನೆ, ಬಂದ್ ಸಮಯದಲ್ಲಿ ನೂರಾರು ಟೈರುಗಳನ್ನು ಸುಡುವ ಮೂಲಕ ವಾಯು ಮಾಲಿನ್ಯ ಹೆಚ್ಚಾಗಲು ತಾವೇ ಕಾರಣರಾಗುತ್ತಿದ್ದಾರೆ.

ಈ ನಿಟ್ಟಿನಲ್ಲಿ ವಿಶ್ವದ ಒಟ್ಟಾರೆ ಸ್ಥಿತಿಯೂ ಭಿನ್ನವಾಗಿಲ್ಲ. ವಿಶ್ವದ ಜನಸಂಖ್ಯೆಯಲ್ಲಿ ಶೇಕಡಾ 92ರಷ್ಟು ಜನ ಸಹನೀಯವಲ್ಲದ ಮಟ್ಟದಲ್ಲಿ ವಾಯು ಮಾಲಿನ್ಯ ಇರುವ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ ಎನ್ನುತ್ತಿದೆ ವಿಶ್ವ ಆರೋಗ್ಯ ಸಂಸ್ಥೆಯ ವರದಿ. ಅದರಲ್ಲೂ ಕನಿಷ್ಠ ಮತ್ತು ಮಧ್ಯಮ ಆದಾಯ ಇರುವ ದೇಶಗಳಲ್ಲಿ ಪರಿಸ್ಥಿತಿ ಚಿಂತಾಜನಕವಾಗಿದೆ. ಪ್ರತಿ ವರ್ಷ ಜಗತ್ತಿನಲ್ಲಿ ಸುಮಾರು 30 ಲಕ್ಷ ಜನ ವಾಯು ಮಾಲಿನ್ಯದಿಂದ ಬರುವ ರೋಗಗಳಿಂದಲೇ ಸಾವನ್ನಪ್ಪುತ್ತಿದ್ದಾರೆ. ಅದರಲ್ಲೂ ಶೇಕಡಾ 94ರಷ್ಟು ಜನರು ಶ್ವಾಸಕೋಶದ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳು ಮತ್ತು ಪಕ್ಷವಾತದಿಂದ ಸಾಯುತ್ತಿದ್ದಾರೆ.

ಹೆಚ್ಚುತ್ತಿರುವ ವಾಯು ಮಾಲಿನ್ಯಕ್ಕೆ ಪರಸ್ಪರರನ್ನು ದೂರುವ ದೇಶಗಳು, ಜಾಗತಿಕ ಮಟ್ಟದಲ್ಲಿ ಒಗ್ಗಟ್ಟಾಗಿ ಈ ಸಮಸ್ಯೆಯನ್ನು ಎದುರಿಸಲು ಕೈಗೊಳ್ಳುತ್ತಿರುವ ಕ್ರಮಗಳು ಪರಿಣಾಮಕಾರಿಯಾಗಿಲ್ಲ. ಕೇವಲ ಘೋಷಣೆಗಳನ್ನು ಕೂಗುವುದರಿಂದ, ಜಾಹೀರಾತುಗಳನ್ನು ಪ್ರಕಟಿಸುವುದರಿಂದ ನಿಜವಾದ ಸಮಸ್ಯೆ ಬಗೆಹರಿಯುವುದಿಲ್ಲ. ಮುಂದುವರಿದ ದೇಶಗಳು ಸ್ವಚ್ಛ ಇಂಧನ ತಂತ್ರಜ್ಞಾನಗಳನ್ನು ಹಿಂದುಳಿದ ದೇಶಗಳ ಜತೆಗೆ ಹಂಚಿಕೊಳ್ಳಬೇಕಾದ ಅಗತ್ಯವಿದೆ. ಈ ತಂತ್ರಜ್ಞಾನ ಕಡಿಮೆ ಬೆಲೆಗೆ ದೊರೆಯುವಂತೆಯೂ ಮಾಡಬೇಕಾಗಿದೆ. ಮುಂದುವರಿದ ದೇಶಗಳ ಜೀವನಶೈಲಿಯೂ ಬದಲಾಗಬೇಕಿದೆ. ಉರುವಲು ಬಳಕೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ, ಹೆಚ್ಚುತ್ತಿರುವ ವಾಹನಗಳ ಬಳಕೆಯನ್ನು ತಗ್ಗಿಸುವ ಮತ್ತು ವಾಯುಮಾಲಿನ್ಯ ಹೆಚ್ಚಿಸುವ ಉದ್ಯಮಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಎಲ್ಲ ದೇಶಗಳೂ ಒಗ್ಗಟ್ಟಿನಿಂದ ದುಡಿಯಲು ಯೋಜನೆಗಳನ್ನು ಜಾರಿಗೊಳಿಸಬೇಕಿದೆ.

■ ಬಿ.ಎಂ.ಹನೀಫ್

